5. ಇಬ್ಬರು ಗುತ್ತಿಗೆದಾರರಿಂದ ಶೇ. 10 ರಷ್ಟು ಪಾವತಿಸಿರುವ ಟೆಂಡರ್ : ಬಿಡ್ ಮೊತ್ತವನ್ನು ಟೆಂಡರು ನಿಯಮಗಳ ಉಲ್ಲಂಘನೆಗಾಗಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಇ) ಹೊಸ ರಸ್ತೆಗಳನ್ನು ಸಂಚಾರಿ ಪೊಲೀಸ್‌ನವರು ಗುರುತಿಸಿಕೊಟ್ಟ ನಂತರ ಬೆಂಗಳೂರು ಮಹಾನಗರ ಪಾಲಿಕೆಯ ಆರ್ಥಿಕ ಮತ್ತು ತೆರಿಗೆ ಸ್ಥಾಯಿ ಸಮಿತಿಯ ಸನುಮೋದನೆ ಪಡೆದು, ಟೆಂಡರು ಕಂ ಹರಾಜು ಮೂಲಕ ಆಯುಕ್ತರು ಅಥವಾ ಅವರ ಅಧಿಕಾರ ಪಡೆದ ಅಧಿಕಾರಿಗಳು ಗುತ್ತಿಗೆ ನೀಡಲು ಅರ್ಹರಾಗಿರುತ್ತಾರೆ.

ಕೊಳ್ಳೇಗಾಲ ಪಟ್ಟಣದ ಒಳಚರಂಡಿ ಹಾಗೂ ಕುಡಿಯುವ ನೀರಿನ ವ್ಯವಸ್ಥೆ

1380 (1623) ಶ್ರೀ ಜಿ.ಎನ್. ನಂಜುಂಡಸ್ವಾಮಿ (ಕೊಳ್ಳೇಗಾಲ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲ ಪಟ್ಟಣದ ಒಳಚರಂಡಿ ಸುಧಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಆ) ಪುರಸಭಾ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ 2ನೇ ಹಂತದ ಕಾರ್ಯವು ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಆಗಿದ್ದಲ್ಲಿ, ಕಾರ್ಯವನ್ನು ಪೂರ್ಣಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಮುಂದಿರುವುದಿಲ್ಲ.

ಆ) ಬಂದಿದೆ.

ಇ) ಈ ಯೋಜನೆಯಡಿಯಲ್ಲಿ ಜಲ ಶುದ್ಧೀಕರಣಾಗಾರದ ನಿರ್ಮಾಣಕ್ಕೆ ನೀಡಲಾಗಿದ್ದ ನಿವೇಶನದ ತಕರಾರಿನಿಂದ ಯೋಜನೆಯ ಕಾರ್ಯವು ಕುಂಠಿತಗೊಂಡಿರುತ್ತದೆ. ಈ ನಿವೇಶನವನ್ನು ಡಾ: ಬಿ.ಆರ್. ಅಂಬೇಡ್ಕರ್ ಸಂಘಕ್ಕೆ ಸೇರಿರುತ್ತದೆ ಎಂದು ತಕರಾರು ಮಾಡಿರುವುದರಿಂದ ಕೆಲಸ ನಿಂತಿರುತ್ತದೆ. ಸದರಿ ಸಂಘದ ಪ್ರತಿನಿಧಿಗಳಲ್ಲಿ ಮಂಡಳಿಯ ಅಧಿಕಾರಿಗಳು ಅನೇಕ ಬಾರಿ ವಿನಂತಿಸಿಕೊಂಡಾಗ್ಯೂ ನಿವೇಶನ ಸ್ಥಳವನ್ನು ಬಿಡದ ಕಾರಣ ಕಾಮಗಾರಿಯನ್ನು ಪ್ರಾರಂಭಿಸುವುದು. ದುಸ್ತರವಾಗಿರುತ್ತದೆ.

ಜಿಲ್ಲಾಧಿಕಾರಿಗಳು ಈ ವಿಷಯದ ಬಗ್ಗೆ ಪುನರ್ ವಿಮರ್ಶಿಸಿ 15 ದಿನಗಳೊಳಗಾಗಿ ನಿವೇಶನವನ್ನು ಮಂಡಳಿಯ ಸುಪರ್ದಿಗೆ ನೀಡಲು ತಹಸೀಲ್ದಾರ್‌ರಿಗೆ ನಿರ್ದೇಶನ ನೀಡಿರುತ್ತಾರೆ. ನಿವೇಶನವು ಮಂಡಳಿಯ ಸುಪರ್ದಿಗೆ ಬಂದ ಕೂಡಲೇ ಕಾಮಗಾರಿಯನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗುವುದು.

ರಾಜ್ಯದಲ್ಲಿ ಪ್ಲೇವಿನ್ ಲಾಟರಿ

1371 (924) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ತುರುವೇಕೆರೆ): ಮಾನ್ಯ ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ಲೇವಿನ್ ಲಾಟರಿ ಯಾವಾಗ ಪ್ರಾರಂಭ ಆಯಿತು?

ಆ) ರಾಜ್ಯಾದ್ಯಂತ ಇದಕ್ಕೆ ಸಂಪೂರ್ಣ ವಿರೋಧ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ?